# ಸಾಮಾಜಿಕ ಮಾಧ್ಯಮ ಎಂಬುದು ಕ್ರೇಜ್

ಚೈತನ್ಯಾ ಉದಯದ ‘ರಾಧಿಕಾ’ ರಮ್ಯಾ



◆ **ನಟನೆಯ ಅಭಿರುಚಿ ಹುಟ್ಟಿದ್ದು ಹೇಗೆ?**

ಮೈಸೂರು ಜಿಲ್ಲೆ ಕೆ.ಆರ್. ನಗರದಲ್ಲಿ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಬೆಳೆದೆ. ಮೈಸೂರಿನಲ್ಲಿ ಕಾಲೇಜಿಗೆ ಸೇರಿದ ನಂತರ ನಟನೆಯ ಆಸಕ್ತಿ ನನಗೆ ಬೆಳೆಯಿತು. ಅದೇ ಹುರುಪಿನಿಂದ ಕಿರುಚಿತ್ರಗಳಲ್ಲಿ ಅಭಿನಯ ಆರಂಭಿಸಿದೆ. ಕ್ರಮೇಣ ಇದರ ಆಸಕ್ತಿ ಹೆಚ್ಚಿದ್ದರಿಂದ ಸಿನಿಮಾ, ಧಾರಾವಾಹಿಗಳಿಗೆ ಆಡಿಷನ್ ಕೊಡಲು ಆರಂಭಿಸಿದೆ. ನಟಿ ಆಗಿಯೇ ಬಿಡುತ್ತೇನೆ ಎನ್ನುವ ಹಟದಿಂದ ಪ್ರಯತ್ನಿಸಲಿಲ್ಲ. ಏನೋ ಒಂದು ಪ್ರಯತ್ನ, ನೋಡೋಣ ಎನ್ನುವ ಕುತೂಹಲ ಈ ವೃತ್ತಿಯಲ್ಲಿ ತೊಡಗುವಂತೆ ಮಾಡಿತು. ಉದಯದ ‘ರಾಧಿಕಾ’ದಲ್ಲಿ ನಾಯಕಿಯ ತಂಗಿ ಪಾತ್ರ ಮಾಡುತ್ತಿದ್ದೇನೆ.

◆ **ಪಾತ್ರವನ್ನು ಹೇಗೆ ಅನುಭವಿಸುತ್ತಿದ್ದೀರಿ?**

ಇದರ ವಿಶೇಷ ಏನು ಅಂದರೆ, ಪ್ರೀತಿ ತುಂಬಿದ ಒಂದು ಕುಟುಂಬದಲ್ಲಿ ಬೆಳೆದ ಹುಡುಗಿ. ಅಕ್ಕನ ಮೇಲೆ ಅವಲಂಬನೆ ಆಗಿರುತ್ತಾಳೆ. ಎಂತಹ ಆಕಸ್ಮಿಕ ಅಂದರೆ ವಾಸ್ತವದಲ್ಲಿ ನಾನೂ ನನ್ನ ಅಕ್ಕನನ್ನು ಅವಲಂಬಿಸಿದ್ದೇನೆ. ಕೌಟುಂಬಿಕ ಬಾಂಧವ್ಯ ಸಖತ್ತಾಗಿದೆ. ಒಳ್ಳೆಯ ತಂಡದ ಜೊತೆ ಇದ್ದೇನೆ ಎನ್ನುವ ಭಾವ ನನ್ನದು. ಮೊದಲು ಎನ್ನುವುದಕ್ಕಿಂತ ಸಿಕ್ಕಾಪಟ್ಟೆ ಎಂಜಾಯ್ ಮಾಡುತ್ತಿದ್ದೇನೆ. ಇದೆಲ್ಲ ನೋಡಿದರೆ ಹೊಸತು ಅಂತ ನನಗೆ ಅನ್ನಿಸಿಲ್ಲ.

◆ **ಕಿರುಚಿತ್ರಗಳ ರೂಪಿಸಿದ ಸಂದರ್ಭ ಹೇಗಿತ್ತು?**

ಕಿರುಚಿತ್ರದ ಬಗ್ಗೆ ಯಾವ ಯೋಚನೆಯೂ ನನಗೆ ಇರಲಿಲ್ಲ. ಹೇಗೆ ಇರುತ್ತವೆ, ಅದನ್ನು ರೂಪಿಸುವ ಬಗೆ ಕೂಡ ಗೊತ್ತಿರಲಿಲ್ಲ. ಕಾರ್ತಿಕ್ ಎನ್ನುವವರು, ಇನ್‌ಸ್ಟಾಗ್ರಾಂನಲ್ಲಿ ನನ್ನ ಫೋಟೊ ನೋಡಿ ಕಾಲ್ ಮಾಡಿದರು. ಮೈಸೂರಿನಲ್ಲಿ ಇದ್ದ ನನ್ನನ್ನು ಬೆಂಗಳೂರಿಗೆ ಕರೆಸಿದರು. ಒಂದು ದಿನ ಕಾರ್ಯಾಗಾರ ಮಾಡಿ ಸ್ವಲ್ಪಮಟ್ಟಿಗೆ ನಟನೆಯ ತರಬೇತಿ ನೀಡಿದರು. ಆದರೂ ಅದನ್ನು ಭಯದಲ್ಲೇ ಮಾಡಿದೆ. ಶಾಲಾದಿನಗಳಲ್ಲಿಯೇ ಅಭಿನಯಕ್ಕೆ ಆಕರ್ಷಿತಳಾಗಿದ್ದೆ. ಆದರೆ ತರಬೇತಿಯನ್ನು ತೆಗೆದುಕೊಳ್ಳಲು ಸಾಧ್ಯ ಆಗಲೇ ಇಲ್ಲ. ನಾಟಕವನ್ನೂ ಮಾಡಲಿಲ್ಲ. ನನ್ನ ತಂದೆಗೆ ಇದೆಲ್ಲ ಅಷ್ಟಾಗಿ ಇಷ್ಟ ಆಗುತ್ತಿರಲಿಲ್ಲ. ತಾಯಿ ಬೆಂಬಲದಿಂದ ಮುನ್ನುಗ್ಗಿದೆ. ಈಗ ತಂದೆ ಕೂಡ ಇಷ್ಟಪಟ್ಟು ಪ್ರೋತ್ಸಾಹಿಸುತ್ತಿದ್ದಾರೆ. ಕಿರುಚಿತ್ರದ ನಂತರ ವೆಬ್ ಸೀರೀಸ್ ಮಾಡಿದೆ.

◆ **ಸಾಮಾಜಿಕ ಮಾಧ್ಯಮಗಳ ಕಾರ್ಯ ಹೇಗಿರುತ್ತದೆ?**

ಸಾಮಾಜಿಕ ಮಾಧ್ಯಮ ಕ್ರೇಜ್ ಅಷ್ಟೇ. ವಿಡಿಯೊ ರೀಲ್ಸ್ ಪೋಸ್ಟ್ ಮಾಡುವುದು ಕ್ರೇಜ್. ಹೀಗೆ ಮಾಡುವುದನ್ನೇ ಇನ್‌ಫ್ಲುಯೆನ್ಸರ್ ಎನ್ನುತ್ತಾರೆ. ಅಲ್ಲಿ ಕ್ಲಿಕ್ ಆದರೆ ಜನಪ್ರಿಯತೆ ಬಂದೇ ಬರುತ್ತದೆ. ಆ ರಂಗದಲ್ಲಿ ಹೊಸ ಹೊಸ ಪ್ರಯೋಗ ಮತ್ತು ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಅಲ್ಲಿ ಕೆಲವೊಂದು ಉತ್ಪನ್ನಗಳ ಪ್ರಚಾರವೂ ನಡೆಯುತ್ತಿದೆ. ಇಂತಹ ಅವಕಾಶ ಸಿಕ್ಕರೆ ಅದು ಒಳ್ಳೆಯ ಆದಾಯ ಮೂಲವೂ ಆಗಬಹುದು. ಅದರಿಂದ ಹಣ ಬರಲು ಶುರುವಾದರೆ, ಅದನ್ನೇ ಉದ್ಯೋಗ ಮಾಡಿಕೊಂಡು ಕೆಲವರು ಅದರಲ್ಲೇ ಮುಳುಗುತ್ತಾರೆ.

◆ **ತೆರೆಯಲ್ಲಿ ಕಾಣಿಸಿಕೊಂಡ ನಂತರ ಸಮಾಜ ನಿಮ್ಮನ್ನು ಹೇಗೆ ನೋಡಿದೆ?**

ಬೇರೆ ಯಾರೇಕೆ ನಮ್ಮ ಕುಟುಂಬ ವರ್ಗದವರೆಲ್ಲ ಖುಷಿಪಡುತ್ತಾರೆ. ಮೊದಲು ಬಹುತೇಕರಿಗೆ ಇಷ್ಟ ಇರಲಿಲ್ಲ. ಸೀರಿಯಲ್ ಮಾಡುವುದು ಅವರಿಗೂ ಈಗ ಖುಷಿ ಕೊಟ್ಟಿದೆ. ಇದರಿಂದ ನನಗೂ ಹೊಸ ಹುರುಪು ಸಿಕ್ಕಿದೆ. ನನ್ನ ಸ್ನೇಹ ಬಳಗ ಕೂಡ ಮೆಚ್ಚುಗೆಯನ್ನು ಸೂಚಿಸುತ್ತಿದೆ. ಇದೇ ಕ್ಷೇತ್ರದಲ್ಲಿ ತೊಡಗಿಕೊಳ್ಳುತ್ತೇನೆ. ನನಗೆ ನಟನೆಯೊಂದೇ ಕೆಲಸ ಅಂದುಕೊಂಡಿದ್ದೇನೆ. ಇನ್ನೂ ನನಗೆ ತುಂಬ ಸಮಯ ಇದೆ. ತಾಳ್ಮೆ ಮತ್ತು ಸಹನೆಯಿಂದ ಹಂತ ಹಂತವಾಗಿ ಬೆಳೆಯುತ್ತೇನೆ. ಸಿನಿಮಾ ಕ್ಷೇತ್ರದಲ್ಲಿಯೂ ತೊಡಗುತ್ತೇನೆ.

■ **ರಾಘವೇಂದ್ರ ಕೆ.**